ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಅವರು ಉತ್ತರ ಕೊಡುವುದಕ್ಕೆ ತಯಾರಿಲ್ಲವೆಂದರೆ ಹೇಗೆ? ನಾವು ಉತ್ತರವನ್ನು ಕೇಳುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಅರ್ಧ ಗಂಟೆ ಮುಂದೂಡಿ, ಪುನಃ ಸೇರಲಾಗುವುದು.

(ಸದನವನ್ನು 10 ಗಂಟೆ 46 ನಿಮಿಷದಿಂದ ಅರ್ಧಗಂಟೆಗಳ ಕಾಲ ಮುಂದೂಡಿ ಪುನಃ ಸೇರಲು ನಿಶ್ಚಯಿಸಲಾಯಿತು)

(ಸಭೆಯು ಬೆಳಿಗ್ಗೆ 11 ಗಂಟೆ 33 ನಿಮಿಷಕ್ಕೆ ಮತ್ತೆ ಸಮಾವೇಶಗೊಂಡಿತು)

(ಈ ಹಂತದಲ್ಲಿ ಬಿ.ಜೆ.ಪಿ. ಹಾಗೂ ಜೆ.ಡಿ.(ಎಸ್) ಪಕ್ಷದ ಕೆಲವು ಸದಸ್ಯರು ಬಾವಿಯಲ್ಲಿದ್ದು, ಧರಣಿ ಮಾಡುತ್ತಾ ಸರ್ಕಾರದ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗುತ್ತಿದ್ದರು.)

(ಗೊಂದಲ)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ, ಪ್ರಶ್ನೋತ್ತರ ಆದ ತಕ್ಷಣ ಉತ್ತರ ನೀಡುತ್ತಾರೆ.

(ಗೊಂದಲ)

ಅಧ್ಯಕ್ಷರು : ಇದೆಲ್ಲವೂ ಯಾವುದೂ ದಾಖಲೆಗೆ ಹೋಗುವುದು ಬೇಡ.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ದಾಖಲಿಸಿರುವುದಿಲ್ಲ)

ಅಧ್ಯಕ್ಷರು : ನಾನು ಒಂದು ಹೇಳುತ್ತೇನೆ, ಪ್ರಶ್ನೋತ್ತರಕ್ಕಿಂತ ಮೊದಲು ಇದಕ್ಕೆ ಅವಕಾಶ ಕೊಟ್ಟರೆ ನಮ್ಮ ನಿಯಮಕ್ಕೆ ವಿರೋಧವಾಗಿ ಆಗುತ್ತದೆ. ಈಗ ಅವರು ಉತ್ತರ ಕೊಡಲು ತಯಾರಿದ್ದಾರೆ. ಪ್ರಶ್ನೋತ್ತರ ಆದ ನಂತರ ಉತ್ತರ ಕೊಡುತ್ತಾರೆ. ಅದರಲ್ಲೇನಿದೆ? ಪ್ರಶ್ನೋತ್ತರ ಆದ ಮೇಲೆ ಉತ್ತರ ಕೊಟ್ಟರೆ ನಿಮಗೇನು ತೊಂದರೆ?